ಹುಬ್ಬಳ್ಳಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಕೈಗೊಳ್ಳುವ ಬಗ್ಗೆ

೬೧೪ ಶ್ರೀ ಪಿ. ಸಿ. ಸಿದ್ದನಗೌಡ (ಕಲಘಟಗಿ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಹುಬ್ಬಳ್ಳಿ ತಾಲ್ಲೂಕಿನ ಕೋಳಿವಾಡ ಮಲ್ಲಿನವಾಡ ಹಾಗೆ, ಉಮಚಗಿಗಳಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಕೈಗೊಳ್ಳಲು ಸರಕಾರದವರು ಉದ್ದೇಶಿಸಿದ್ದಾರೆಯೇ ?

(ಆ) ಕೂಡಲಗಿ ಗ್ರಾಮ ಕಲಘಟಗಿ ತಾಲ್ಲೂಕಿನ ಕೊನೆಯ ಗ್ರಾಮವಾಗಿದ್ದು ಅಲ್ಲಿ ಕುಡಿಯುವ ನೀರಿನ ತೊಂದರೆ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

(ಇ) ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು).—

(ಅ) ಕೋಳಿವಾಡ ಮತ್ತು ಉಮಚಗಿಹಳ್ಳಿಗಳಿಗೆ ಉದ್ದೇಶಿಸಲಾಗಿದೆ. ಮಲ್ಲಗವಾಡಹಳ್ಳಿಗೆ ೫ ಕೊಳವೆ ಭಾವಿಗಳನ್ನು ಹಾಕಿ ಪಂಪು ಜೋಡಿಸಲಾಗಿದೆ.

(ಆ) ಬಂದಿದೆ.

(ಇ) ೮ ಕೊಳವೆ ಬಾವಿಗಳನ್ನು ಕೊರೆಯಲಾಗಿದ್ದು ೬ ಪಂಪುಗಳನ್ನು ಅಳವಡಿಸಲಾಗಿದೆ. ಈ ಪೈಕಿ ೩ ಭಾವಿಗಳಲ್ಲಿ ಸಿಹಿ ನೀರಿದ್ದು, ಉಳಿದ ೫ ಭಾವಿಗಳಲ್ಲಿ ಸವಳು ನೀರಿದ್ದು ನೀರು ಪೂರೈಕೆ ಮಾಡಲಾಗುತ್ತಿದೆ.

ಶ್ರೀ ಪಿ. ಸಿ. ಸಿದ್ದನಗೌಡ.—ಅಧ್ಯಕ್ಷರೇ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಕೋಳಿವಾಡ ಮತ್ತು ಉಮಚಗಿಹಳ್ಳಿಗಳಿಗೆ ಕುಡಿಯುವ ನೀರನ್ನು ಸರಬರಾಜು ಮಾಡುವ ಬಗ್ಗೆ ಉದ್ದೇಶಿಸಲಾಗಿದೆ ಎಂದು ಹೇಳಿದ್ದು, ಮಲ್ಲಿನವಾಡ ಗ್ರಾಮದ ಬಗ್ಗೆ ಏನೂ ಹೇಳಿಲ್ಲ. ಇವತ್ತು ಈ ಮೂರೂ ಗ್ರಾಮಗಳನ್ನು ಸೇರಿಸಿ ಯೋಜನೆ ಮಾಡಿದರೆ ಖರ್ಚು ಕಡಿಮೆ ಆಗುತ್ತದೆಂದು ಹೇಳುತ್ತೇನೆ. ಈ ಯೋಜನೆಗಳನ್ನು ಆದಷ್ಟು ಬೇಗ ಮಂಜೂರು ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಅಧ್ಯಕ್ಷರೇ, ಕೋಳಿವಾಡ ಗ್ರಾಮಕ್ಕೆ ಈಗಾಗಲೇ ೫೩.೩೬ ಲಕ್ಷ ರೂಪಾಯಿ ಮಂಜೂರಾಗಿದೆ. ಈ ವರ್ಷ ಅದಕ್ಕಾಗಿ ೧ ಲಕ್ಷ ೭೨ ಸಾವಿರ ರೂಪಾಯಿಗಳನ್ನಿಟ್ಟಿದ್ದೇವೆ. ಹಾಗೂ ಅದನ್ನು ಪ್ರಾರಂಭ ಮಾಡುತ್ತೇವೆ. ಮಲ್ಲಿನವಾಡ ಗ್ರಾಮದ ಬಗ್ಗೆ ಹೇಳಿದ್ದು ದಾದರೆ ಅಲ್ಲಿಯ ಜನಸಂಖ್ಯೆ ೧೫೫೮ ಇರುವುದರಿಂದ ಅಲ್ಲಿಗೆ ಯೋಜನೆಯನ್ನು ವಿಸ್ತರಿಸತಕ್ಕೆ ಪ್ರಶ್ನೆ ಸದ್ಯಕ್ಕೆ ಇಲ್ಲ. ಮತ್ತೆ ಉಮಚಗಿಗಾಗಿ ಮುಖ್ಯಮಂತ್ರಿಗಳ ಬರ ಪರಿಹಾರ ನಿಧಿಯಿಂದ ೩.೯೬ ಲಕ್ಷ ರೂಪಾಯಿಗೆ ತಾಂತ್ರಿಕ ಮಂಜೂರಾತಿ ಕೊಟ್ಟಿದ್ದು ಈ ವರ್ಷ ಅದನ್ನು ಆರಂಭ ಮಾಡುತ್ತೇವೆ. ಇನ್ನು ಕೂಡಲಗಿ ಗ್ರಾಮದ ಬಗ್ಗೆ ಸದ್ಯಕ್ಕೆ ಯಾವ ಯೋಜನೆಯೂ ಇಲ್ಲ. ಪಶ್ಚಿಮ ಘಟ್ಟ ಯೋಜನೆಯಲ್ಲಿ ಈ ಗ್ರಾಮಕ್ಕೆ ಸಹಾಯ ಸಿಗಬಹುದಾ ಬಗ್ಗೆ ಮುಂದಿನ ವರ್ಷ ಪ್ರಯತ್ನ ಮಾಡುತ್ತೇವೆ.

ಶ್ರೀ ಪಿ.ಸಿ. ಸಿದ್ದನಗೌಡ.—ಕೂಡಲಗಿ ಗ್ರಾಮಕ್ಕೆ ೪-೫ ಕಿ.ಮೀಟರ್ ದೂರದಿಂದ ನೀರು ತಂದು ಕೊಟ್ಟರೆ ಆಗುತ್ತದೆ. ಅಲ್ಲಿ ಇರುವ ೮ ಕೊಳವೆ ಬಾವಿಗಳಲ್ಲಿ ೫ ವಿಫಲವಾಗಿವೆ. ಇನ್ನು ಉಳಿದ ೩ ಬಾವಿಗಳಲ್ಲಿ ನೀರು ಇಲ್ಲದೇ ಬಹಳ ತೊಂದರೆ ತಲೆದೋರಿದೆ. ಯಾವುದಾದರೂ ಒಂದು ಯೋಜನೆಯನ್ನು ಈ ಗ್ರಾಮಕ್ಕೆ ತರಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಅದನ್ನು ಮುಂದಿನ ವರ್ಷ ಪರಿಶೀಲನೆ ಮಾಡುತ್ತೇನೆ.